ಶ್ರೀ ವಿ. ಎಂ. ದೇವ್.—ಏಕ ಸದಸ್ಯ ಆಯೋಗ ಮಾಡಿರುವುದು ಜೋನರ್ ಕೌನ್ಸಿಲನ್ನು ಕಡೆಗಣಿಸಿದಂತಾಗುತ್ತದೆ; ಕಾನೂನು ಬದ್ಧವಾಗಿರುವುದಿಲ್ಲ ಎನ್ನುವ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರಾ ?

9-00 A.M.

ಶ್ರೀ ಎಂ. ವಿ. ರಾಮರಾವ್.—ಕೇಂದ್ರ ಸರ್ಕಾರದವರಿಗೆ ಯಾವುದು ಕಾನೂನು ಬದ್ಧವಾಗಿ ಇಲ್ಲ ಎನ್ನುವುದು ತಿಳಿಯುತ್ತದೆ.

ಶ್ರೀ ವಿ. ಎಂ. ದೇವ್.—ಜೋನರ್ ಕೌನ್ಸಿಲ್ ಏಜೆನ್ಸಿ ಈ ವಿಚಾರವನ್ನು ಪರಿಶೀಲಸಲು ಇದ್ದರೂ ಈ ಕಮಿಷನ್ ಮಾಡಿದ್ದನ್ನು ನೋಡಿದರೆ, ಅವರನ್ನು ಜಮಾ ಖರ್ಚಿನಲ್ಲಿ ಇಟ್ಟಿಲ್ಲವೆಂದು ಕಾಣುತ್ತದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ಗಲಾಟೆ ಜಾಸ್ತಿಯಾಗುತ್ತದೆ ಎನ್ನುವುದನ್ನು ಮುಖ್ಯವಾಗಿ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರಾ ! ಇದಕ್ಕೆ ಖಚಿತವಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ರಾಮರಾವ್.—ಏನೂ ಗಲಾಟೆ ಆಗುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ರಾಜ್ಯಕ್ಕೆ ಬರಬೇಕಾದ ಕನ್ನಡ ಭಾಗಗಳ ಪಟ್ಟಿ ಕೊಟ್ಟಿದ್ದೀರಾ ! ಏಕಸದಸ್ಯ ಆಯೋಗದವರು ಈ ಪ್ರದೇಶಗಳ ಸೇರ್ಪಡೆ ಬಗ್ಗೆ ವಿಚಾರ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೀರಾ !

ಶ್ರೀ ಎಂ. ವಿ. ರಾಮರಾವ್.—ಈ ಆಯೋಗಕ್ಕೆ ನಮ್ಮ ರಾಜ್ಯದ ಕಡೆಯಿಂದ ನಾವು ಹೇಳ ತಕ್ಕ ವಿಷಯ ಏನು ಇದೆ, ಅದನ್ನು ಇನ್ನು ಮೇಲೆ ಅವರಿಗೆ ತಿಳಿಸತಕ್ಕದ್ದು ಇದೆ.

ಶ್ರೀ ಎಸ್. ಎಂ. ಕೃಷ್ಣ.—ಏಕ ಸದಸ್ಯ ಆಯೋಗ ರಚನೆಯನ್ನು ತಾತ್ವಿಕವಾಗಿ ವಿರೋಧಿಸಿ ಮೈಸೂರು ರಾಜ್ಯ ಸರ್ಕಾರದ ಮಂತ್ರಿಗಳು ಕೆಲವರು ರಾಜೀನಾಮೆ ಸಲ್ಲಿಸಿದರು. ಈ ರಾಜೀನಾಮೆ ವಿಚಾರ ಏನು ಆಯಿತು ?

ಶ್ರೀ ಎಂ. ವಿ. ರಾಮರಾವ್.—ಯಾರೂ ಏನೂ ಆ ರೀತಿ ರಾಜೀನಾಮೆ ಸಲ್ಲಿಸಲಿಲ್ಲ.

Demands of N.G.Os

*Q.—191. Sri SANJEEVANATH AIKALA (Suratkal).—

Will the Chief Minister be pleased to state :—

(*a*) whether they have received an ultimatum from the State N.G.Os Association, as to the serious step they are forced to take, if their demands are not conceded by Government ;

(*b*) what action the Government propose to take to meet the demands of the N.G.Os of the State ?

A.—Sri M. V. RAMA RAO (Minister for Home) [on behalf of SRI S. NIJALINGAPPA (Chief Minister)].—

(*a*) No.

(*b*) Does not arise.

Sri SANJEEVANATH AIKALA.—Is it not a fact that the State N.G.O. Association has sent an ultimatum to the Government that they would go on mass leave on 6th of December and ultimately if their demands were not met, they would resort to a pen down strike ?

†ಶ್ರೀ ಎಂ. ವಿ. ರಾಮರಾವ್.—ಅಲ್ಟಿಮೇಟಂ ಕೊಡಲಿಲ್ಲ.